

ರಾಜೇಶ್. ಅವರ ಕುಟುಂಬ ಹೈದರಾಬಾದಿನಲ್ಲಿತ್ತು. ಚಂದದ ಕುಟುಂಬ.

ನನ್ನ ಅಪ್ಪನ ಹೆಸರು ಅಯಿಲಯ್ಯ. ಯಾವಾಗಲಾದರೂ ಹಣಕ್ಕಾಗಿ ಫೋನ್ ಮಾಡುತ್ತಿದ್ದ. ಅಷ್ಟೋ ಇಷ್ಟೋ ಕಳುಹಿಸುತ್ತಿದ್ದೆ. ನಮ್ಮ ತಂಗಿಗೆ ಗಂಡುಮಗ ಹುಟ್ಟಿದ. ನಾನು ಹೋಗಲಿಲ್ಲ. ತುರ್ತಾಗಿ ಹಣ ಬೇಕೆಂದು ತಿಳಿಸಿದಾಗ, ಸಾಲ ಮಾಡಿ ಕಳುಹಿಸಿದೆ. ತಮ್ಮ ಇಂಜಿನಿಯರಿಂಗ್ ಫೇಲ್ ಆದರೆ ಅದೊಂದು ಖರ್ಚು.

‘ಅಪುತ್ರಸ್ಯ ಗತಿರ್ನಾಸ್ತಿ’ ಎಂದು ನಂಬಿದ ನನ್ನ ಅಪ್ಪನಿಗೆ ಮೂವರು ಹೆಣ್ಣುಮಕ್ಕಳ ನಂತರ ಮಗ ಹುಟ್ಟಿದ. ಅಪ್ಪನಿಗೆ ಅವನೇ ಲೋಕ. ಸದಾ ಏನೋ ಗೊಣಗುತ್ತಾ ಒಂದು ರೀತಿ ಇರುತ್ತಿದ್ದ. ವಯಸ್ಸಿಗೆ ಬಂದ ಹೆಣ್ಣುಮಕ್ಕಳೆಂದು ನೋಡದೇ ಆಗಾಗ ಹೊಡೆಯುತ್ತಿದ್ದ ಕೂಡ.

ನಾವು ಮೂವರೂ ಒಂದು ಕಾಲದಲ್ಲಿ ಕುಂಟುಕುದುರೆಗಳು. ನಂತರ ಎದೆಗಳ ಮೇಲಿನ ಒಲೆಗಳು. ಅಮ್ಮ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರಿಂದ, ಅಕ್ಕನ ಓದು ನಿಲ್ಲಿಸಿ, ಮನೆಯ ಕೆಲಸದವಳಾಗಿ ಇಟ್ಟ. ನಾನು ಫೀಜು ಇಲ್ಲದೇ ಸರ್ಕಾರಿ ಕಾಲೇಜಿನಲ್ಲಿ ಓದಿದ್ದರಿಂದಲೂ, ಮನೆಯ ಅಗತ್ಯಗಳಿಗೆ ಏನೋ ಒಂದಿಷ್ಟು ಉಪಯೋಗಪಡುವ ಸ್ಕಾಲರ್‌ಶಿಪ್ಪುಗಳ ಕಾರಣದಿಂದಲೂ ನನ್ನ ಓದಿಗೆ ಅಡಚಣೆ ಉಂಟಾಗಲಿಲ್ಲ.

ಇನ್ನೂ ಕೆಲವು ವರ್ಷಗಳು ಕಳೆದವು. ನಾನು ಡಿಗ್ರಿ ಕೊನೆಯ ವರ್ಷದಲ್ಲಿದ್ದಾಗ ಅಮ್ಮ ಸತ್ತುಹೋದಳು. ನಮ್ಮ ಅಕ್ಕ ಯಾರನ್ನೋ ನಂಬಿ ಮನೆಯಿಂದ ಹೊರಟುಹೋಗಿ, ಆ ನಂತರ ಮೋಸ ಹೋಗಿ, ಲೋಕದಿಂದ ಹೊರಟುಹೋದಳು. ನಮ್ಮ ಸೋದರತ್ತೆಯ ಮಗನನ್ನು ನನಗೆ ಕೊಟ್ಟು ಮದುವೆ ಮಾಡಬೇಕೆಂದುಕೊಂಡರು. (ಕ್ಷಮಿಸಿ. ನನ್ನನ್ನು ನಮ್ಮ ಸೋದರತ್ತೆ ಮಗನಿಗೆ ಕೊಟ್ಟು ಮಾಡಬೇಕೆಂದುಕೊಂಡರು). ಆದರೆ ನನಗಿಂತ ಅಂದವಾಗಿ, ಆಕರ್ಷಣೀಯವಾಗಿ ಇರುವ ನಮ್ಮ ತಂಗಿಯ ಮೇಲೆ ಅವನ ಮನಸ್ಸಿದೆಯೆಂದು ತಿಳಿಯಿತು. ತಂಗಿಯನ್ನು ಕೊಟ್ಟರೆ ವರದಕ್ಷಿಣೆ ಇಲ್ಲದೇ ಮಾಡಿಕೊಳ್ಳುವೆ ಎಂದ. ನೋಡನೋಡುತ್ತಿದ್ದಂತೆಯೇ ತಂಗಿಯ ಮದುವೆ ಆಗಿಹೋಯಿತು. ನನಗೆ ಬಾವ ಎಂದರೆ ದೊಡ್ಡದಾಗಿ ಇಷ್ಟವಿರಲಿಲ್ಲ. ಯಾವುದೋ ಒಂದು ಮದುವೆ ನಡೆದು, ಈ ಮನೆಯಿಂದ ಹೊರಬಿದ್ದರೆ ಸಾಕು ಎನ್ನಿಸುತ್ತಿತ್ತು.

ಪ್ರಸಿದ್ಧವಾದ ಇಂಜಿನಿಯರಿಂಗ್ ಕಾಲೇಜಿನಲ್ಲಿ ತಮ್ಮನಿಗೆ ಡೊನೇಷನ್ ಕಟ್ಟಿ ಸೇರಿಸುತ್ತ, ‘ಹೇರಳವಾಗಿ ಹಣ ಸುರಿದು ನಾನು ನಿನ್ನ ಮದುವೆ ಮಾಡಲಾರೆ’ ಎಂದ ಅಪ್ಪ. ನನ್ನ ಜೀವನ ಮಾರ್ಗವನ್ನು ನಾನೇ ಆರಿಸಿಕೊಳ್ಳಬೇಕೆಂದು ಅರ್ಥವಾಯಿತು. ಕಂಡ ಕಂಡ ಉದ್ಯೋಗಗಳೆಲ್ಲದಕ್ಕೂ ಅಪ್ಲೈ ಮಾಡಿದೆ. ನನಗೆ ಬಂದ ಮಾರ್ಕುಗಳಿಗೂ, ಇಂಟರ್ವ್ಯೂಗಳಲ್ಲಿನ ಉತ್ತರಗಳಿಗೂ, ನಮ್ಮದು ರಿಸರ್ವೇಷನ್ ಕುಲವಾಗಿದ್ದರಿಂದಲೂ ಮೂರು ತಿಂಗಳ ಒಳಗೇ ಒಂದು ಗ್ರಾಮೀಣ ಬ್ಯಾಂಕಿನಲ್ಲಿ ಪೋಸ್ಟಿಂಗ್ ಬಂದಿತು. ನನಗಿದ್ದ ನಾಲ್ಕು ಸೀರೆಗಳು, ಅಡುಗೆ ಸಾಮಾನು ತೆಗೆದುಕೊಂಡು ಹೊರಟೆ.

ಅದೇ ನನ್ನ ಮೊದಲ ಪ್ರಯಾಣ.

***

ನೋಡನೋಡುತ್ತಿದ್ದಂತೆಯೇ ಬ್ಯಾಂಕಿಗೆ ಸೇರಿ ಆರು ತಿಂಗಳುಗಳು ಕಳೆದವು. ಒಂದು ದಿನ ಊಹಿಸದ ಘಟನೆ ನಡೆಯಿತು. ಶಿವರಾಂರವರ ಸೊಸೆ ಅಪಘಾತದಲ್ಲಿ ಮರಣಿಸಿದಳೆಂಬ ವಾರ್ತೆ ಬಂದಿತು. ಗಂಡ ಹೆಂಡತಿಯರಿಬ್ಬರೂ ತರಾತುರಿಯಿಂದ ಹೈದರಾಬಾದಿಗೆ ಹೋದರು. ಅವಳಿಗೆ ಆರು ತಿಂಗಳ ಮಗನಿದ್ದ.

ಒಂದು ವಾರದ ನಂತರ ಶಿವರಾಂರವರು ಮರಳಿ ಬಂದರು. ಅತ್ತೆ ಮಾತ್ರ ಒಂದು ತಿಂಗಳ ನಂತರ ಬಂದರು. ಬರುತ್ತಾ ಆರು ತಿಂಗಳ ಎಳೆಕೂಸನ್ನು ಕರೆತಂದರು. ಬಹಳ ಮುದ್ದಾಗಿದ್ದ. ನನ್ನನ್ನು ನೋಡಿದೊಡನೆ ಹತ್ತಿರ ಬಂದ. ಹುಡುಗನ ಹೆಸರು ಆಕಾಶ್. ನಾಲ್ಕು ದಿನಗಳಲ್ಲಿ ಅವನು ನನಗೆ ಬಹಳ ಅಂಟಿಕೊಂಡುಬಿಟ್ಟ. ಅವನ ಅಮ್ಮನನ್ನು ಬಹುಶಃ ನನ್ನಲ್ಲಿ ನೋಡುತ್ತಿದ್ದನೇನೋ.

ಒಂದು ದಿನ ಅತ್ತೆ ನನ್ನೊಂದಿಗೆ, ‘‘ಅಲ್ಲಿ ಹೈದರಾಬಾದಲ್ಲಿ ನಮ್ಮ ಮಗ ಒಬ್ಬನೇ ಮಗುವನ್ನು ನೋಡಿಕೊಳ್ಳಲು ಸಾಧ್ಯವಿಲ್ಲ ಎಂದು ನಮ್ಮೊಂದಿಗೆ ಕರೆತಂದಿರುವೆವಮ್ಮಾ. ಆದರೆ ಅವನು ಮಗನನ್ನು ಬಿಟ್ಟು ಇರಲಾರೆ ಎನ್ನುತ್ತಿದ್ದಾನೆ. ಅವನ ನೋವು ಸರಿಯಾದದ್ದೇ. ಆಯಾಳನ್ನು ಇಟ್ಟುಕೊಳ್ಳುವುದು ಅವನಿಗೆ ಇಷ್ಟ ಇಲ್ಲ. ನಾನು ಮಾತ್ರ ಅಲ್ಲಿ ಎಷ್ಟು ದಿನ ಇರಬಲ್ಲೆ? ಇದಕ್ಕೆ ಒಂದೇ ದಾರಿ. ಅವನು ಇನ್ನೊಂದು ಮದುವೆ ಆಗುವುದು. ‘ಮಾಡಿಕೊಳ್ಳೋ’ ಎಂದರೆ ‘ಮಗುವನ್ನು ಸ್ವಂತ ಮಗನಂತೆ ನೋಡಿಕೊಳ್ಳುವವರು ದೊರಕಬೇಕಮ್ಮಾ’ ಎನ್ನುತ್ತಿದ್ದಾನೆ’’ ಎಂದರು ದಿಗಿಲಿನಿಂದ.

ಅವರ ಆಲೋಚನೆಯ ಜಾಡು ತಿಳಿದುಕೊಂಡೆ. ಆದರೆ ನನ್ನಲ್ಲಿ ಎಷ್ಟೋ ಸಂಶಯಗಳು. ಬಹುಶಃ ನನ್ನ ಅನುಮಾನಗಳು ಅವರಿಗೆ ಅರ್ಥವಾದಂತಿದ್ದವು. ಎರಡು ದಿನಗಳಿಗೆ ರಾಜೇಶ್ ಬಂದ. ನನ್ನನ್ನು ಕುಳ್ಳಿರಿಸಿಕೊಂಡು ವಿವರವಾಗಿ ಹೇಳಿದ. ‘ನಾನು ಸರ್ಕಾರಿ ಉದ್ಯೋಗಿ. ಚಿಕ್ಕದೇ ಆದರೂ ಹೈದರಾಬಾದಿನಲ್ಲಿ ಸ್ವಂತ ಮನೆ ಇದೆ. ನಿಮ್ಮನ್ನು ಯಾವುದೇ ಕೊರತೆ ಇಲ್ಲದಂತೆ ನೋಡಿಕೊಳ್ಳಬಲ್ಲೆ. ಆದರೆ ಒಂದು ವಿಷಯ. ನಿಮ್ಮ ಉದ್ಯೋಗ ಗ್ರಾಮೀಣ ಬ್ಯಾಂಕಿನಲ್ಲಾದ್ದರಿಂದ ಹೈದರಾಬಾದಿನಲ್ಲಿ ಪೋಸ್ಟಿಂಗ್ ದೊರಕದು. ಉದ್ಯೋಗವನ್ನು ಬಿಡಬೇಕಾಗುತ್ತದೆ. ಬೇಕಾದರೆ ಆಮೇಲೆ ಹೈದರಾಬಾದಿನಲ್ಲಿ ಯಾವುದೋ ಒಂದು ಉದ್ಯೋಗ ಸಿಗದೇ ಇರದು. ನಾನೇ ಉದ್ಯೋಗ ಬಿಟ್ಟುಬಿಟ್ಟೆ ಎಂದು ನೀವೆಂದಿಗೂ ದುಃಖ ಪಡಕೂಡದು. ವಿರಾಮವಾಗಿ ಆಲೋಚಿಸಿ ನಿಮ್ಮ ನಿರ್ಧಾರ ಹೇಳಿ’ ಎಂದ.

ಉದ್ಯೋಗ ಮಾಡದಿದ್ದರೂ ಪರವಾಗಿಲ್ಲವೆನ್ನುವ ಗಂಡ; ತಂದೆತಾಯಿಯರಿಗಿಂತ ಹೆಚ್ಚಾಗಿ ಪ್ರೀತಿಸುವ ಅತ್ತೆ ಮಾವಂದಿರು... ಸ್ತ್ರೀಗೆ ಇದಕ್ಕಿಂತ ಏನು ಬೇಕು?

ರಿಜಿಸ್ಟರ್ ಆಫೀಸಿನಲ್ಲಿ ನಮ್ಮ ಮದುವೆ ನಿರಾಡಂಬರವಾಗಿ ನಡೆದುಬಿಟ್ಟಿತು. ಅಪ್ಪ ನಿಷ್ಠುರವಾಗಿ, ‘ನಿನ್ನಷ್ಟಕ್ಕೆ ನೀನೇ ನಿರ್ಧಾರಗಳನ್ನು ತೆಗೆದುಕೊಳ್ಳುವೆಯಾ? ಒಂದು ಮಾತನ್ನಾದರೂ ನಮಗೆ ಮೊದಲೇ ಹೇಳಲಾರದಾದೆಯಾ? ಅದರಲ್ಲಿಯೂ ನಿನ್ನ ಗಂಡನಿಗೆ ಎರಡನೇ ಮದುವೆ’ ಎಂದು ಏನೇನೋ ನಿಂದೆಗಳನ್ನು ಮಾಡಿದ. ಸಂಬಳದಲ್ಲಿ ಉಳಿಸಿಕೊಂಡಿದ್ದ ಹಣವನ್ನು ಕಳುಹಿಸಿದೆ. ಅದರಿಂದ ಆತ ಮತ್ತೆ ಮಾತಾಡಲಿಲ್ಲ. ಉದ್ಯೋಗಕ್ಕೆ ರಾಜೀನಾಮೆ ಮಾಡಿ ಹಳ್ಳಿಯಿಂದ ಹೈದರಾಬಾದ್‌ಗೆ ಹೋದೆ.

ಅದು ನನ್ನ ಎರಡನೇ ಪ್ರಯಾಣ.

***

ದಿನಗಳು, ವಾರಗಳು, ತಿಂಗಳುಗಳು ಕಳೆದುಹೋದವು. ಆಕಾಶ್‌ನನ್ನು ಶಾಲೆಗೆ ಸೇರಿಸಿದಾಗ, ಅದೇ ಶಾಲೆಯಲ್ಲಿ ನನಗೆ ಟೀಚರ್ ಕೆಲಸ ದೊರಕಿತು. ಲೆಕ್ಕಗಳನ್ನು ಚೆನ್ನಾಗಿ ಹೇಳಿಕೊಡುವೆನೆಂದೂ, ಟ್ಯೂಷನ್ ಹೇಳಿಕೊಡೆಂದೂ ಕೆಲವರು ಕೇಳಿದರು. ‘ಅವರು